ರಾತ್ರಿ ಪಾರ್ಟಿಯಲ್ಲಿ ಗುಂಡ ಸ್ವಲ್ಪ ಹೆಚ್ಚೇ ಕುಡಿದು ಬಿಟ್ಟಿದ್ದ. ನಂತರ ಓರ್ವ ನಾಗರಿಕ ಪ್ರಜೆಯ ಜವಾಬ್ದಾರಿ ನಿಭಾಯಿಸುವ ಸಲುವಾಗಿ ತಾನು ಸ್ವಯಂ ವಾಹನ ಚಲಾಯಿಸದಿರುವ ನಿರ್ಧಾರ ತಳೆದ. ಟ್ಯಾಕ್ಸಿ ಗೊತ್ತು ಮಾಡಿಕೊಂಡು ಪಾರ್ಟಿಗೆ ವಿದಾಯ ಹೇಳಿದ.
ಕೊಂಚ ಸಮಯದ ಬಳಿಕ ಸ್ನೇಹಿತರ ಫೋನ್ ಬಂತು, ‘ನೀನು ಅದೆಲ್ಲಿ ಮಾಯವಾಗಿ ಹೋದೆ ಮಾರಾಯ? ಪಾರ್ಟಿಯಂತೂ ನಿನ್ನ ಮನೆಯಲ್ಲೇ ನಡೆಯುತ್ತಿದೆ’.

ಈಜು ಬಾರದ 300 ಪಾಮರರು ಹಡಗಿನಲ್ಲಿ ಪ್ರಯಾಣಿಸುತ್ತಿದ್ದರು. ದುರಂತವೆಂದರೆ ಹಡಗು ಮುಳುಗದಿದ್ದರೂ ಆ ಮುನ್ನೂರು ಜನರೂ ಮುಳುಗಿ ಸತ್ತರು. ಹೇಗೆ ಗೊತ್ತೆ?
ನಡು ಸಮುದ್ರದಲ್ಲಿ ಹಡಗು ಕೆಟ್ಟು ನಿಂತಿತ್ತು, ಅದನ್ನು ದೂಡಿ ದಡ ಸೇರಿಸುವ ಸಲುವಾಗಿ ಅವರೆಲ್ಲರೂ ಕೆಳಗಿಳಿದಿದ್ದರು.

ಪೊಲೀಸ್: ಒಂದೇ ಅಂಗಡಿಯಲ್ಲಿ ನೀನು ಬಿಡದೆ ಮೂರು ದಿನ ಕಳ್ಳತನ ಮಾಡಿರುವೆಯಾ?
ಕಳ್ಳ: ಸ್ವಾಮಿ, ಮೊದಲ ಒಂದು ದಿನ ಮಾತ್ರವೇ ನಾನು ನನ್ನ ಪತ್ನಿಗಾಗಿ ಸೀರೆ ಕದ್ದಿದ್ದೆ. ನಂತರದ ಎರಡು ದಿನ ಅದರ ಬಣ್ಣ ಬದಲಾಯಿಸಲು ಹೋಗಿದ್ದೆ.



ಅಮ್ಮ ಬಸ್ ಹತ್ತಿ ಹೋದವರು ಇನ್ನೂ ಮನೆಗೆ ಬಂದಿಲ್ಲ.. ಅಪ್ಪ ಅವರೆಲ್ಲಿದ್ದಾರೆ ಎಂದು ಪತ್ತೆ ಮಾಡಲು ಪತ್ತೆದಾರರ ಬಳಿ ಹೋಗಿದ್ದಾರೆ




ಹಾಗೇ ನಮಗೆ ಪರೀಕ್ಷೆ ಮಾಡದೇ ಉಚಿತ ಅಂಕಗಳನ್ನೂ ಕೊಡಬಹುದಿತ್ತು.!

ಗುಂಡ: ಹುಡುಗಿಯರು ಯಾವತ್ತೂ ಮೊದಲು ಪ್ರೊಪೋಸ್ ಮಾಡುವುದಿಲ್ಲ. ಗೊತ್ತೇ?
ಗೋಪಿ: ಹೌದಾ, ಅದೇಕೆ?
ಗುಂಡ: ಏಕೆಂದರೆ ಬ್ರೇಕಪ್ ವೇಳೆ, ‘ನೀನೇ ನನ್ನ ಹಿಂದೆ ಬಿದ್ದಿದ್ದೆ, ನಾನಲ್ಲ’ ಎಂದು ಹೇಳಬಹುದಲ್ವಾ? ಅದಕ್ಕೆ.

ಶರಾಬು ಕುಡಿದು ಗುಂಡ ಚಲಾಯಿಸುತ್ತಿದ್ದ ಕಾರು ಒಂದು ಕಂಬಕ್ಕೆ ಡಿಕ್ಕಿ ಹೊಡೆದು ಅಪಘಾತಕ್ಕೀಡಾಯಿತು.
ಪೊಲೀಸ್: ಹೊರಗೆ ಬಾ.
ಗುಂಡ: ಕ್ಷಮಿಸಿ ಬಿಡಿ ಸಾಹೇಬರೆ.
ಪೊಲೀಸ್: ಶರಾಬು ಕುಡಿದು ಗಾಡಿ ಚಲಾಯಿಸುತ್ತೀಯ? ಬಾಯಿ ತೆರೆ.
ಗುಂಡ: ಇಲ್ಲ ಸಾಹೇಬರೇ, ಈಗಾಗಲೇ ಜಾಸ್ತಿ ಕುಡಿದಿದ್ದೇನೆ. ಇನ್ನು ಬೇಡವೇ ಬೇಡ.

ಗೋಪಿ: ವ್ಯಾಪಾರಿಗೂ ಸರ್ಕಾರಿ ನೌಕರನಿಗೂ ಇರುವ ಸಾಮ್ಯತೆ ಹಾಗೂ ವ್ಯತ್ಯಾಸವೇನು?
ರಾಮು: ಏನೋ ಒಗಟಿನಂತಿದೆ, ನೀನೇ ಹೇಳು.
ಗೋಪಿ: ಇಬ್ಬರಲ್ಲೂ ಜ್ವರ ಮತ್ತು ಕೆಲಸವೆನ್ನುವ ಸಾಮ್ಯತೆಯಿದೆ. ವ್ಯತ್ಯಾಸವೆಂದರೆ, ವ್ಯಾಪಾರಿಗೆ ಜ್ವರ ಬಂದರೂ ಕೆಲಸ ಮಾಡುತ್ತಾನೆ ಮತ್ತು ಸರ್ಕಾರಿ ನೌಕರನಿಗೆ ಕೆಲಸವನ್ನು ನೋಡಿ ಜ್ವರ ಬರುತ್ತದೆ.

ಭಕ್ತನೋರ್ವನಿಗೆ ದೇವರು ಪ್ರತ್ಯಕ್ಷನಾಗಿ ಅಮೃತ ನೀಡುತ್ತಾನೆ. ಭಕ್ತ ಅದನ್ನು ಬೇಡವೆನ್ನುತ್ತಾನೆ.
ದೇವರು: ಏಕೆ ವತ್ಸಾ... ಅಮೃತವನ್ನೇಕೆ ಸ್ವೀಕರಿಸುತ್ತಿಲ್ಲ?
ಭಕ್ತ: ಈಗಷ್ಟೇ ಗುಟ್ಕಾ ಬಾಯಿಗೆ ಹಾಕಿದ್ದೇನೆ. ಅದನ್ನೆಂತು ಉಗುಳಲಿ ಪ್ರಭು?

ಗೋಪಿ: ಏನು ತುಂಬಿಲ್ಲವೆಂದರೂ ದೇವರು ಮಾನವರಲ್ಲಿ ಆಶಾವಾದವನ್ನು ಭರಪೂರ ತುಂಬಿದ್ದಾನೆ.
ಪತ್ನಿ: ಈಗೇನಾಯಿತು ನೀವು ಹಾಗನ್ನುವಂಥಾದ್ದು?
ಗೋಪಿ: ಬದುಕಿನಲ್ಲಿ ಭವಿಷ್ಯದ ಒಂದು ಕ್ಷಣದ ಭರವಸೆಯಿಲ್ಲದಿದ್ದರೂ, ಮುಂದಿನ ಎರಡು ವರ್ಷಗಳಿಗಾಗುವಷ್ಟು ಉಪ್ಪಿನಕಾಯಿ ನೀನು ಹಾಕಿಟ್ಟಿರುವೆ ನೋಡು.

ಗೋಪಿ: ಈಗಿನ ಮೊಬೈಲ್‌ಗಳನ್ನು ನಾನು ಸ್ಮಾರ್ಟ್‌ಫೋನ್‌ಗಳೆಂದು ನಂಬುವುದಿಲ್ಲ.
ರಾಮು: ಹಾಗಾದರೆ ನಿನ್ನ ಪ್ರಕಾರ ಯಾವುದು ಸ್ಮಾರ್ಟ್‌ಫೋನ್?
ಗೋಪಿ: ‘ನನ್ನ ಫೋನ್ ಎಲ್ಲಿದೆ?’ ಎಂದು ನಾನು ಕೇಳಿದಾಕ್ಷಣ, ‘ನಾನಿಲ್ಲಿ ದಿಂಬಿನ ಕೆಳಗಿದ್ದೇನೆ’ ಎಂದುತ್ತರಿಸುವ ಫೋನ್!

ಟೀಚರ್: ಜಗತ್ತಿನಲ್ಲಿ ಪೋಸ್ಟ್‌ಮ್ಯಾನ್‌ಗಳಿದ್ದಾರೆಯೇ ಹೊರತು ಪೋಸ್ಟ್ ವುಮೆನ್‌ಗಳು ಇಲ್ಲ. ಏಕೆ ಗೊತ್ತೆ?
ವಿದ್ಯಾರ್ಥಿ: ಏಕೆಂದರೆ ಮಹಿಳೆಯರಿಗೆ ಒಂದು ‘ಡೆಲಿವರಿ’ಗೆ 9 ತಿಂಗಳ ಕಾಲಾವಧಿ ಬೇಕಾಗುತ್ತದೆ.

ಎರಡು ಮಕ್ಕಳ ತಾಯಿ ತನ್ನ ಮೂರನೇ ಮದುವೆ ಮಾಡಿಕೊಳ್ಳುತ್ತಿದ್ದಳು. ಸಪ್ತಪದಿ ತುಳಿಯುತ್ತಿದ್ದಾಗ ಒಂದು ಮಗು ಅಳ ತೊಡಗಿತು. ಅದಕ್ಕೆ ಆಕೆಯ ಪ್ರತಿಕ್ರಿಯೆ ಕೇಳಿ ವರ ಬೆಚ್ಚಿ ಬಿದ್ದ. ಆಕೆ ಅಂಥಾದ್ದೇನು ಹೇಳಿದಳು ಗೊತ್ತೆ? ‘ಸುಮ್ಮನೆ ಬಾಯಿ ಮುಚ್ಚಿಕೊಂಡಿರು. ಇಲ್ಲದಿದ್ದರೆ ಮುಂದಿನ ಸಲ ನಿನ್ನನ್ನು ಕರೆತರುವುದಿಲ್ಲ’.

ಸಂಗ್ರಹ: ರಮಣ್ ಶೆಟ್ಟಿ ರೆಂಜಾಳ್, ಮುಂಬೈ